**DW-01**

**ಇಂದು ದಿನಾಂಕ: 13.01.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು : ವಾದಿ ಪರ ಶ್ರೀ.ಜೆ.ಎಸ್.ಕೆ.ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿರುವ ವಿಷಯಗಳು ಗೊತ್ತಿದೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ವಕೀಲರಿಗೆ ಹೇಳಿ ಬರೆಸಿದ್ದೇನೆ. ಪ್ರತಿವಾದಿಗಳು ನನ್ನ ರಕ್ತ ಸಂಬಂಧಿಗಳು ಎಂದರೆ ಸರಿ. ದಿನಾಂಕ 07.12.2017 ರಂದು ನಾನು ವಾದಿಗಳಿಗೆ ಕರಾರು ಪತ್ರ ಬರೆದುಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಅದೇ ದಿನ ದಾವಾ ಆಸ್ತಿಯನ್ನು ರೂ.9,50,000/- ಕ್ಕೆ ಮಾರಾಟ ಮಾಡಲು ಒಪ್ಪಿಕೊಂಡು ಅದರ ಪೈಕಿ ರೂ.9,25,000/- ಮುಂಗಡ ಹಣ ಪಡೆದು ಉಳಿದ ರೂ.25,000/- 1 ವರ್ಷದ 2 ತಿಂಗಳ ನಂತರ ಪಡೆದುಕೊಂಡು ಕ್ರಯ ಪತ್ರ ಬರೆದುಕೊಡುವುದುಗಿ ಒಪ್ಪಿಕೊಂಡಿದ್ದೇನೆ ಎಂದರೆ ಸರಿಯಲ್ಲ.

ನಾನು ಒಪ್ಪಿಕೊಂಡ ರೀತಿ ನಿಗದಿತ ಸಮಯಕ್ಕೆ ಕ್ರಯ ಪತ್ರ ಬರೆದುಕೊಡಲಿಲ್ಲ ಎಂದರೆ ಸರಿಯಲ್ಲ. ವಾದಿಗಳು ನನಗೆ ನೋಟೀಸು ಕೊಡಿಸಿದ್ದಾರೆ ಎಂದರೆ ಸರಿ. ನೋಟೀಸು ಸ್ವೀಕರಿಸಿದರೂ ಸಹ ಕ್ರಯ ಪತ್ರ ಬರೆದುಕೊಟ್ಟಿಲ್ಲ ಎಂದರೆ ನಾನು ಕ್ರಯದ ಕರಾರು ಪತ್ರವನ್ನೇ ಮಾಡಿಕೊಟ್ಟಿಲ್ಲ. ನನ್ನ ಪ್ರತಿವಾದ ಪತ್ರದಲ್ಲಿ ಹೇಳಿರುವ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ. ದಾವಾ ಆಸ್ತಿ ಎಕರೆ ಒಂದಕ್ಕೆ 20,00,000/- ಬೆಲೆ ಬಾಳುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಎಕರೆ ಒಂದಕ್ಕೆ 20,00,000/- ಬೆಲೆ ಬಾಳುತ್ತದೆ ಎಂದು ತೋರಿಸಲು ದಾಖಲೆ ಕೊಟ್ಟಿಲ್ಲ.

**ಮರು ವಿಚಾರಣೆ ಇಲ್ಲ.**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

**ಓ.ಹೆ.ಕೆ.ಸರಿ ಇದೆ.**

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ**